ಆದನ್ನು ನಮಗೆ ಕೊಡಿ ಎಂದು ಒತ್ತಾಯಪೂರ್ವಕವಾಗಿ ಕೇಳಿದ್ದೇವೆ. ಅವರು ನಮಗೆ ಕೊಡದಿದ್ದರೂ ಕೂಡ ಆದನ್ನು ನಾವು ತೆಗೆದುಕೊಳ್ಳುತ್ತೇವೆ. ಆ ಹಕ್ಕು ನಮಗೆ ಇದೆ. ಆ ವಿಷಯ ನಮಗೆ ಗೊತ್ತಿದೆ. ಇಷ್ಟೆಲ್ಲಾ ನಾವು ಕೇಳಿಕೊಂಡಿರುವುದು ಸಾರ್ವಜನಿಕ ಹಿತದೃಷ್ಟಿಯಿಂದ. ಆದ್ದರಿಂದ ಸರ್ಕಾರ ನಿಸ್ಸಹಾಯಕ ಸ್ಥಿತಿಯಲ್ಲೇನೂ ಇಲ್ಲ.

ಶ್ರೀ ಎಚ್.ಡಿ. ದೇವೇಗೌಡ.—ಸ್ವಾಮಿ, ಅವರು ಸಾರ್ವಜನಿಕ ಹಿತದೃಷ್ಟಿಯಿಂದ ಅಲ್ಲಲ್ಲಿ ಕೆಲವು ಪಾರ್ಕ್‌ಗಳನ್ನು ಮಾಡುವುದಕ್ಕಾಗಿ ಅವಶ್ಯಕವಾದ ಜಾಗಗಳನ್ನು ಇಟ್ಟುಕೊಂಡಿದ್ದಾರೆ, ಅಂತಹ ಜಾಗಗಳನ್ನು ದುಡ್ಡು ತೆಗೆದುಕೊಂಡು ಕೊಟ್ಟಿದ್ದಾರೆ. ಹೀಗಿರಬೇಕಾದರೆ, ಅವರು ಶಾಲೆಯನ್ನು ಕಟ್ಟುವುದಕ್ಕೆ ಜಾಗ ಕೊಡಿ ಎಂದರೆ ಹೀಗೆ ಅಡ್ಡಿಪಡಿಸುತ್ತಿದ್ದಾರೆ ಎಂದರೆ ಹೇಗೆ?

ಶ್ರೀ ಜೆ.ಬಿ. ಶಂಕರರಾವ್.—ಪರಿಸ್ಥಿತಿ ಹಾಗಿದ್ದರೆ ಅದನ್ನು ಪರಿಶೀಲನೆ ಮಾಡಿ, ಅದು ಸೂಕ್ತವಾಗಿದ್ದರೆ ಆದನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಚಂದ್ರಶೇಖರ್.—ಸ್ವಾಮಿ, ರಾಜಾಜಿನಗರದ ಶಾಲೆಯ ಪರಿಸ್ಥಿತಿ ಪತ್ರಿಕೆಯಲ್ಲಿ ಬಂದಿದೆ. ಅದೇ ಪರಿಸ್ಥಿತಿ ನಮ್ಮ ಜಯನಗರದಲ್ಲಿ ಇದೆ. ಈಗ ಶಿಕ್ಷಣ ಇಲಾಖೆಯವರು ಅಲ್ಲಿ ೪ ರೂಮುಗಳುಳ್ಳ ಒಂದು ಕಟ್ಟಡವನ್ನು ಕಟ್ಟುವುದಕ್ಕಾಗಿ ನಿಮಗೊಂದು ೪೦ ಸಾವಿರ ರೂಪಾಯಿಗಳ ಎಸ್ಟಿಮೇಟನ್ನು ಕಳಿಸುವುದಕ್ಕೆ ಏರ್ಪಾಡು ಮಾಡುತ್ತಿದ್ದಾರೆ. ಬೇರೆ ಕಡೆ ಖಾಲಿ ಜಮೀನು ತೆಗೆದುಕೊಂಡು ಕಟ್ಟಡ ಕಟ್ಟುವ ವರೆಗೆ ೪೦ ಸಾವಿರ ರೂಪಾಯಿಗಳ ಎಸ್ಟಿಮೇಟನ್ನು ಸ್ಯಾಂಕ್ಷನ್ ಮಾಡಿ ೪ ರೂಮ್‌ಗಳ ಒಂದು ಕಟ್ಟಡ ಕಟ್ಟುವುದಾದರೆ ಈ ಒಂದು ಸಮಸ್ಯೆ ಸಧ್ಯಕ್ಕೆ ಸಾಲ್ವ್ ಆಗುತ್ತದೆ. ಈಗ ಪ್ರೈಮರಿ ಸ್ಕೂಲ್ ಏನಿದೆ ಅದರ ಮುಂದುಗಡೆ ಇರತಕ್ಕಂಥ ನಿವೇಶನದಲ್ಲಿ ೪ ರೂಮ್‌ಗಳ ಕಟ್ಟಡ ಕಟ್ಟುವುದಕ್ಕೆ ಶಿಕ್ಷಣ ಇಲಾಖೆಯವರು ೪೦ ಸಾವಿರ ರೂಪಾಯಿಗಳ ಒಂದು ಎಸ್ಟಿಮೇಟನ್ನು ಏನು ಕಳಿಸುತ್ತಿದ್ದಾರೆ ಅದಕ್ಕೆ ತಾವು ಮಂಜೂರಾತಿ ನೀಡಬೇಕು.

ಶ್ರೀ ಜೆ.ಬಿ. ಶಂಕರರಾವ್.—ನಮಗೆ ೪ ರೂಮುಗಳುಳ್ಳ ಕಟ್ಟಡವನ್ನು ಕಟ್ಟಿಸಬೇಕೆನ್ನುವ ವಿಚಾರ ಇದೆ. ಡಿಪಾರ್ಟ್‌ಮೆಂಟ್‌ನವರೂ ಕೂಡ ನಮಗೆ ಪ್ರಪೋಸಲ್ ಕಳಿಸಿದ್ದಾರೆ. ತಾತ್ಪೀಕವಾಗಿ ಅವರ ಬೇಡಿಕೆಯನ್ನು ಪೂರೈಸಬೇಕಾಗಿದ್ದರೆ ಅದಕ್ಕೆ ತಕ್ಕ ಹಣವನ್ನು ಒದಗಿಸಿಕೊಂಡು ನಿವೇಶನ ದೊರೆತ ಮೇಲೆ ಕಟ್ಟಡವನ್ನು ಕಟ್ಟಿಸುತ್ತೇವೆ.

Transport Conveyance for Mandya District Sericulture Farmers

380 SRI M.S. ATMANANDA (Mandya).—Will the Minister of State for Sericulture and Youth Services be pleased to state :

(a) Whether it has come to the notice of the Government that farmers of Mandya, Maddur, Malavalli and the surrounding areas are bringing the silk cocoons for sale, at Ramanagar Market;

(b) whether it has come to the notice of the Government that they have no proper Transport facility available for bringing cocoon to the market;

(c) if so, whether Government intend to take any measures to remove the difficulty?

SMT. RENUKA RAJENDRAN (Minister of State for Sericulture and Youth Services).—

(a) Yes

(b) No.

(c) Government cannot make any special arrangement for Transport.

ಶ್ರೀ ಎಂ.ಎಸ್. ಆತ್ಮಾನಂದ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ನನ್ನ (ಆ) ಪ್ರಶ್ನೆಗೆ ಉತ್ತರ ಕೊಡುತ್ತಾ ಅದು ಸರ್ಕಾರದವರ ಗಮನಕ್ಕೆ ಬಂದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಈಗ ನಾನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮಂಡ್ಯ, ಮದ್ದೂರ್ ಮಳವಳ್ಳಿ ಹಾಗೂ ಸುತ್ತಮುತ್ತಲ ಪ್ರದೇಶದ ರೈತರು ತಾವು ಬೆಳೆದ ರೇಷ್ಮೆಯನ್ನು ರಾಮನಗರದ ರೇಷ್ಮೆ ಮಾರುಕಟ್ಟೆಗೆ ತಂದು ಹಾಕುತ್ತಿದ್ದಾರೆ. ಸುಮಾರು ೩೦–೩೨ ಮೈಲಿಗಳಾಗತಕ್ಕಂಥ ಮಂಡ್ಯ, ಮಳವಳ್ಳಿಯಿಂದ ಅವರು ರೇಷ್ಮೆಯನ್ನು ರಾಮನಗರಕ್ಕೆ ತೆಗೆದುಕೊಂಡು ಬರಬೇಕಾದರೆ ಅವರಿಗೆ ಯಾವುದೇ ವಾಹನ ಸೌಕರ್ಯವಿರುವುದಿಲ್ಲ. ಅವರಿಗೆ ರಾಮನಗರಕ್ಕೆ ಬರುವುದಕ್ಕೆ ತೊಂದರೆಯಾಗುತ್ತಿದೆ. ಸರ್ಕಾರದವರಿಗೆ ಈ ರೇಷ್ಮೆ ಬೆಳೆಯನ್ನು ಅಭಿವೃದ್ಧಿಪಡಿಸಬೇಕೆಂಬ ಉದ್ದೇಶವಿರುವಾಗ ಅವರಿಗೆ ಈ ದಿಕ್ಕೆಯಲ್ಲಿ ವಾಹನ ಸೌಲಭ್ಯವನ್ನು ಏತಕ್ಕೆ ಕೊಡಬಾರದು ಎಂದು ಕೇಳುತ್ತೇನೆ.

† ಶ್ರೀಮತಿ ರೇಣುಕಾ ರಾಜೇಂದ್ರನ್.—ಮಂಡ್ಯ, ಮಳವಳ್ಳಿ, ಮದ್ದೂರ್ ಈ ಪ್ರದೇಶಗಳ ರೇಷ್ಮೆ ಬೆಳೆಗಾರರಿಗೆ ಯಾವುದೇ ರೀತಿಯ ಅಡ್ಡಿ ಆಡಚಣೆಗಳು ಇಲ್ಲ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಹೆಚ್ಚಿನ ಬಸ್‌ಗಳು ಮೈಸೂರಿನಿಂದ ಬೆಂಗಳೂರಿಗೆ ಬರಬೇಕಾದರೆ ರಾಮನಗರದ ಮೂಲಕ ಬರುವುದರಿಂದ ಅವರಿಗೆ ಆ ತೊಂದರೆಯಿಲ್ಲ. ಇನ್ನು ಬೀದರ್, ಬೆಳಗಾಂ, ಬಿಜಾಪುರ ಮತ್ತು ಗುಲ್ಬರ್ಗ ಈ ಪ್ರದೇಶಗಳಿಂದ ರೈತರು ರೇಷ್ಮೆ ಬೆಳೆದು ಚಿಕ್ಕಬಳ್ಳಾಪುರ, ಬಿಜಾಪುರ ಮಾರ್ಗದಿಂದ ತರುತ್ತಿದ್ದಾರೆ. ಅವರಿಗೆ ತೊಂದರೆ ಇದ್ದರೂ ಇರಬಹುದು. ಆದರೆ ನಿಮಗೆ ಅಂತಹ ತೊಂದರೆ ಆಗಿಲ್ಲ ಎಂದು ನಾನು ಹೇಳಬಯಸುತ್ತೇನೆ.

ಶ್ರೀ ಎಂ.ಎಸ್. ಆತ್ಮಾನಂದ—ನಮ್ಮ ಮಂಡ್ಯ ಜಿಲ್ಲೆಯಲ್ಲಿ ಬೆಳೆಯುವಷ್ಟು ರೇಷ್ಮೆಯನ್ನು ಬೀದರ್ ಮತ್ತು ಉಳಿದ ಕಡೆಗಳಲ್ಲಿ ಬೆಳೆಯುವುದಿಲ್ಲ. ನಮ್ಮಲ್ಲಿ ರೇಷ್ಮೆ ಬೆಳೆಯನ್ನು ಹೆಚ್ಚಾಗಿ ಬೆಳೆಯುತ್ತಾರೆ, ರೈತರೆಲ್ಲಾ ಹೆಚ್ಚಾಗಿ ರಾಮನಗರಕ್ಕೆ ರೇಷ್ಮೆಯನ್ನು ತೆಗೆದುಕೊಂಡು ಹೋಗಬೇಕಾಗುತ್ತದೆ. ಮೈಸೂರಿನಿಂದ ಬರತಕ್ಕಂಥ ಬಸ್‌ಗಳಲ್ಲಿ ಪ್ರಯಾಣಿಕರಿಗೇ ಜಾಗ ಇರುವುದಿಲ್ಲ, ಅಂಥಾ ದರದಲ್ಲಿ ಇವರಿಗೆ ಜಾಗ ಹೇಗೆ ಸಿಕ್ಕುತ್ತದೆ? ಆದ್ದರಿಂದ ನಾನು ಹೇಳುವುದೇನೆಂದರೆ ಮಂಡ್ಯ, ಮದ್ದೂರ್, ಮಳವಳ್ಳಿಗಳಿಂದ ರಾಮನಗರಕ್ಕೆ ಬಸ್‌ಗಳನ್ನು ಓಡಿಸುವುದಕ್ಕೆ ಏತಕ್ಕೆ ಪ್ರಯತ್ನಪಡಬಾರದು?

ಶ್ರೀಮತಿ ರೇಣುಕಾ ರಾಜೇಂದ್ರನ್.—ನೀವು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ. ಮಾನ್ಯ ಸಾರಿಗೆ ಮಂತ್ರಿಯವರು ಇಲ್ಲೇ ಇದ್ದಾರೆ. ಅವರು ಈ ಬಗ್ಗೆ ಅರೇಂಜ್‌ಮೆಂಟ್ ಮಾಡುತ್ತಾರೆ ಎಂದು ನಾನು ಭಾವಿಸಿದ್ದೇನೆ.

ಶ್ರೀ ಭೀಮಣ್ಣ ಖಂಡ್ರೆ.—ಸ್ವಾಮಿ, ಬೀದರ್, ಬಿಜಾಪುರ, ಗುಲ್ಬರ್ಗದ ರೈತರು ರೇಷ್ಮೆಯನ್ನು ತರಬೇಕಾದರೆ ಅವರಿಗೆ ಸರಿಯಾದ ವಾಹನ ಸೌಕರ್ಯವಿಲ್ಲದೇ ತೊಂದರೆಗೆ ಒಳಗಾಗಿದ್ದಾರೆ. ಇದನ್ನು ಏನಾದರೂ ಮಾನ್ಯ ಮಂತ್ರಿಯವರು ಪರಿಶೀಲನೆ ಮಾಡಿ ಸೌಲಭ್ಯ ಕಲ್ಪಿಸಿಕೊಡುತ್ತಾರೆಯೇ ಎಂದು ಕೇಳುತ್ತೇನೆ.

ಅಧ್ಯಕ್ಷರು.—ಈಗಿರತಕ್ಕಂಥ ಪ್ರಶ್ನೆಯನ್ನು ತಾವು ಏತಕ್ಕೆ ಅರ್ಥ ಮಾಡಿಕೊಂಡು ಬರುವುದಿಲ್ಲ ?

SRI BHIMANNA KHANDRE Sir, I want transport facility for bringing cocoons to be extended to my District also.

ಅಧ್ಯಕ್ಷರು.—ಈಗ ಪ್ರಶ್ನೆ ಇರತಕ್ಕಂಥಾದ್ದು ಮಂಡ್ಯ, ಮಳವಳ್ಳಿಯಿಂದ ಬರತಕ್ಕಂಥ ರೈತರು ರೇಷ್ಮೆಯನ್ನು ತೆಗೆದುಕೊಂಡು ರಾಮನಗರಕ್ಕೆ ಬರುವುದಕ್ಕೆ ಟ್ರಾನ್ಸ್‌ಪೋರ್ಟ್ ಡಿಫಿಕಲ್ಟಿ ಇದೆ ಎಂದು.

ಶ್ರೀ ಭೀಮಣ್ಣ ಖಂಡ್ರೆ.—ಸ್ವಾಮಿ, ಈಗ ಬೀದರ್, ಬಿಜಾಪುರ, ಗುಲ್ಬರ್ಗದಿಂದ ರೈತರು ಅಷ್ಟು ದೂರದಿಂದ ರೇಷ್ಮೆ ಗೂಡನ್ನು ತರಬೇಕಾದರೆ ಹುಳುಗಳು ಸರಿಯಾಗಿ ಇರುವುದಿಲ್ಲ. Therefore, I request the Hon. Minister to provide transportation facility to the ryots.

† Indicates that remarks or speeches have not been revised by the member concerned.

MR. SPEAKER. - Now, Sri Masiyappa will speak.

ಶ್ರೀ ವಿ. ಮಸಿಯಪ್ಪ.—ಸ್ವಾಮಿ, ಮಾನ್ಯ ಮಂತ್ರಿಯವರು ಕೊಟ್ಟಿರತಕ್ಕಂಥ ಉತ್ತರವನ್ನು ನೋಡಿದಾಗ ಬೀದರ್, ಬಿಜಾಪುರ,ಗುಲ್ಬರ್ಗ, ಚಿತ್ರದುರ್ಗ ಈ ಪ್ರದೇಶಗಳಿಂದ ರೈತರು ಏನು ಅಷ್ಟು ದೂರದಿಂದ ರೇಷ್ಮೆ ಬೆಳೆಯನ್ನು ತರುತ್ತಿದ್ದಾರೆ ಅವರಿಗೆ ತೊಂದರೆ ಇದ್ದರೂ ಇರಬಹುದು, ಆದರೆ ರಾಮನಗರದಿಂದ ತರತಕ್ಕಂಥ ರೈತರಿಗೆ ತೊಂದರೆ ಏನೂ ಇಲ್ಲ ಎಂದು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಚಿತ್ರದುರ್ಗ, ಬೀದರ್, ಬಿಜಾಪುರ ಮತ್ತು ಗುಲ್ಬರ್ಗ ಈ ಕಡೆಗಳಿಂದ ಅಷ್ಟು ದೂರದಿಂದ ಸರ್ಕಾರಿ ಬಸ್ ಗಳಲ್ಲಿ ರೇಷ್ಮೆಗೂಡನ್ನು ತರತಕ್ಕಂಥ ಸಂದರ್ಭದಲ್ಲಿ ಮಳೆ, ಗಾಳಿ ಚಳಿ ಇರತಕ್ಕಂಥ ಈ ಕಾಲದಲ್ಲಿ ಬಹಳ ಮಟ್ಟಿಗೆ ರೇಷ್ಮೆ ಗೂಡು ಅದರ ಒಂದು ಪ್ರಭಾವಕ್ಕೆ ಒಳಗಾಗಿ ಕೆಟ್ಟುಹೋಗುವಂಥ ಸಂದರ್ಭಗಳು ಇವೆ. ಆದ್ದರಿಂದ ಅದನ್ನು ವಿಶೇಷವಾಗಿರತಕ್ಕಂಥ ಸಾರಿಗೆ ವ್ಯವಸ್ಥೆ ಮೂಲಕ ಇಲ್ಲಿಗೆ ತರತಕ್ಕಂಥ ಅವಶ್ಯಕತೆ ಇದೆ. ಅದನ್ನು ನಾರ್ಮಲ್ ಟ್ರಾನ್ಸ್‌ಪೋರ್ಟ್ ಮೂಲಕ ತಂದರೆ ಅದರ ಮಾರ್ಕೆಟ್ ಹೋಗುತ್ತದೆ. ಆದ್ದರಿಂದ ಅಷ್ಟು ದೂರದ ಪ್ರದೇಶಗಳಿಂದ ತರತಕ್ಕಂಥವರಿಗೆ ವಿಶೇಷವಾದ ಸಾರಿಗೆ ವ್ಯವಸ್ಥೆಯನ್ನು ಮಾಡುತ್ತೀರಾ ?

ಶ್ರೀಮತಿ ರೇಣುಕಾ ರಾಜೇಂದ್ರನ್.—ಈಗಾಗಲೇ ನಮ್ಮ ಇಲಾಖೆಯಿಂದ ಅಂತಹ ದೂರದ ಪ್ರದೇಶಗಳಿಂದ ರೇಷ್ಮೆಯನ್ನು ತರತಕ್ಕಂಥವರಿಗೆ ಸಂಚಾರಿ ವಾಹನವನ್ನು ಕೊಡಬೇಕೆಂದು ತೀರ್ಮಾನ ಮಾಡಿ, ಈಗಾಗಲೇ ನಾವು ದಾವಣಗೆರೆ, ಬೆಳಗಾಂ ಈ ಭಾಗದವರಿಗೆ ಈ ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ. ಮಾನ್ಯ ಸದಸ್ಯರು ಹೇಳಿದಂಥ ಭಾಗದ ಪ್ರದೇಶಗಳ ರೈತರಿಗೆ ತೊಂದರೆಯಾಗದ ರೀತಿಯಲ್ಲಿ ಅಲ್ಲಿ ಒಂದು ಮಾರ್ಕೆಟನ್ನು ತೆರೆಯುವ ಯೋಚನೆ ಸರ್ಕಾರಕ್ಕೆ ಇದೆ. ಅದನ್ನು ಸರ್ಕಾರ ಪರಿಶೀಲಿಸುತ್ತದೆ.

ಶ್ರೀ ಭೀಮಣ್ಣ ಖಂಡ್ರೆ.—ನನ್ನ ಬಗ್ಗೆ ಏತಕ್ಕೆ ಈ ಒಂದು ಡಿಸ್ಕ್ರಿಮಿನೇಷನ್ ಇದೆ ಎನ್ನುವುದು ನನಗೆ ಗೊತ್ತಾಗಲಿಲ್ಲ. I also wanted to put the same question which Sri V. Masiyappa has just now put. I want to know what is the disqualification in me and what is relevancy or irrelevancy in putting questions? Is it not an injustice and is not a discrimination? Why are you preventing me, when I wanted to speak.

MR. SPEAKER.—This is a question pertaining to Mandya District. Moreover, sufficient time is not there at our disposal. Therefore I am limiting the questions only to the members of that area.

ಶ್ರೀ ಭೀಮಣ್ಣ ಖಂಡ್ರೆ.—ಸ್ವಾಮಿ, ನನ್ನ ಪ್ರಶ್ನೆಗೆ ಮಾನ್ಯ ಮಂತ್ರಿಯವರು ಉತ್ತರ ಕೊಡಬೇಕು. ನಾನು ಬೀದರ್, ಗುಲ್ಬರ್ಗ, ಬಿಜಾಪುರ, ರಾಯಚೂರು ಬಗ್ಗೆ ಪ್ರಶ್ನೆ ಕೇಳಿದ್ದು ರೆಲೆವೆಂಟ್ ಅಲ್ಲವೇ ? ಹಾಗಾದರೆ ಮಾನ್ಯ ಮಸಿಯಪ್ಪನವರು ಪ್ರಶ್ನೆ ಕೇಳಿದ್ದು ಹೇಗೆ ರೆಲೆವೆಂಟ್ ಆಯಿತು ? Why are you discriminating like this ?

MR. SPEAKER.—The answer has been covered in the question which has been put by Sri V. Masiyappa.

ಶ್ರೀ ಭೀಮಣ್ಣ ಖಂಡ್ರೆ.—ಇದು ನಮಗೆ ಅರ್ಥವಾಗುತ್ತಾ ಇಲ್ಲ. ಹೀಗೆ ಮಾಡುತ್ತಿರುವುದು ಸರಿಯಲ್ಲ. It is not correct on your part

ಶ್ರೀ ಎಂ ಎನ್. ಆತ್ಮಾನಂದ.—ಸ್ವಾಮಿ, ಮದ್ದೂರಿನಲ್ಲಿ ಒಂದು ರೇಷ್ಮೆ ಮಾರುಕಟ್ಟೆಯನ್ನು ಏತಕ್ಕೆ ಸ್ಥಾಪನೆ ಮಾಡಬಾರದು ಎಂದು ಕೇಳುತ್ತೇನೆ.

ಶ್ರೀಮತಿ ರೇಣುಕಾ ರಾಜೇಂದ್ರನ್,—ಸರ್ಕಾರ ಅದನ್ನು ಪರಿಶೀಲಿಸುತ್ತದೆ.